## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಬೆಳಗಾವಿ ಜಿಲ್ಲೆಯ ಚಿಕ್ಕೋಡಿ-ಸದಲಗಾ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳಿಗೆ ವಿಶೇಷ ಅನುದಾನ ಬಿಡುಗಡೆ ಕುರಿತು.

**ಓದಲಾಗಿದೆ:-** ಚುನಾಯಿತ ಪ್ರತಿನಿಧಿಗಳಿಂದ ಸ್ವೀಕೃತಿಯಾಗಿರುವ ಅನುದಾನ ಬಿಡುಗಡೆಯ ಪ್ರಸ್ತಾವನೆಗಳು.

--

**ಪೀಠಿಕೆ:**

ಬೆಳಗಾವಿ ಜಿಲ್ಲೆ, ಚಿಕ್ಕೋಡಿ-ಸದಲಗಾ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವ ಕುರಿತು, ಚುನಾಯಿತ ಪ್ರತಿನಿಧಿಗಳು ಪ್ರಸ್ತಾಪಿಸಿ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಜಾಗ್ರತೆಯಾಗಿ ವಿಶೇಷ ಅನುದಾನ ಬಿಡುಗಡೆ ಮಾಡಲು ಸರ್ಕಾರವನ್ನು ವಿನಂತಿಸಿರುತ್ತಾರೆ. ಈಗಾಗಲೇ ಗ್ರಾಅಪಂ.ರಾಜ್ ಇಲಾಖೆಯಿಂದ ಶಾಸಕರ ಕಾರ್ಯಪಡೆಗಳಿಗೆ ಕ್ಷೇತ್ರವಾರು ಅನುದಾನ ಬಿಡುಗಡೆ ಮಾಡಿರುವುದರಿಂದ ಮತ್ತು ಕಂದಾಯ ಇಲಾಖೆಯೂ ಸಹ **CRF/NCCF** ನಡಿ ಕುಡಿಯುವ ನೀರಿನ ಪರಿಹಾರ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಿರುವುದರಿಂದ, ಸದ್ಯಕ್ಕೆ **ರೂ.50.00**ಲಕ್ಷ ಅನುದಾನವನ್ನು ಬೆಳಗಾವಿ ಜಿಲ್ಲೆ ಚಿಕ್ಕೋಡಿ-ಸದಲಗಾ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಠಾನ ಸಂಬಂಧ ಬಿಡುಗಡೆ ಮಾಡಲು ನಿರ್ಧರಿಸಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 42 ಗ್ರಾನೀಸ(3)2012 ಬೆಂಗಳೂರು, ದಿನಾಂಕ:27.06.2012**

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ **ಬೆಳಗಾವಿ** ಜಿಲ್ಲೆ, **ಚಿಕ್ಕೋಡಿ-ಸದಲಗಾ** ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ ತಲೆದೋರಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸ್ಥಳೀಯ ಅಗತ್ಯತೆಯನುಸಾರ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು **ಅನುಬಂಧ-1**ರಲ್ಲಿರುವಂತೆ ಆದ್ಯತೆ ಮೇಲೆ **KRIDL** ಮುಖೇನ ಅನುಷ್ಠಾನಗೊಳಿಸಲು **ರೂ.50.00ಲಕ್ಷ(ಐವತ್ತು ಲಕ್ಷ ರೂಪಾಯಿಗಳು ಮಾತ್ರ)**ಗಳನ್ನು **2012-13ನೇ** ಸಾಲಿಗೆ ರಾಜ್ಯ ವಲಯದ **C&Q** ಘಟಕದಡಿ **ಬೆಳಗಾವಿ ಜಿಲ್ಲಾ ಪಂಚಾಯತ್‌ಗೆ** ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಅನುಷ್ಠಾನಗೊಳಿಸಿದ ಕಾಮಗಾರಿಗಳ ವಿವರಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳ ಮಾಹಿತಿಗಾಗಿ ಕಳುಹಿಸುವುದು. ಕಾಮಗಾರಿ ಅನುಷ್ಠಾನಗೊಳಿಸುವ ಮುನ್ನ ಪ್ರಸ್ತಿತ ಕಾಮಗಾರಿಗಳು ಯಾವುದೇ ಕ್ರಿಯಾಯೋಜನೆಯಡಿ ಸೇರ್ಪಡೆಯಾಗದಿರುವುದನ್ನು ಖಾತ್ರಿ ಪಡಿಸಿಕೊಳ್ಳತಕ್ಕದ್ದು. ಕಾಮಗಾರಿಗಳ ಅನುಷ್ಠಾನಕ್ಕೆ ಮುನ್ನ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆದುಕೊಳ್ಳತಕ್ಕದ್ದು, ಮತ್ತು ಉದ್ದೇಶಿತ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯವಿರುವ ಬಾಕಿ ಅನುದಾನವನ್ನು ಹಾಗೂ **ಅನುಬಂಧ-2**ರಲ್ಲಿರುವ ಗ್ರಾಮಗಳನ್ನು **NRDWP**ಯಡಿ ಪರಿಶೀಲಿಸಿ, **2012-13**ನೇ ಸಾಲಿನ ಕ್ರಿಯಾಯೋಜನೆಯಡಿಯಲ್ಲಿ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

3. ಈ ಅನುದಾನವನ್ನು ರಾಜ್ಯವಲಯದ **ಲೆಕ್ಕಶೀರ್ಷಿಕೆ:4215-01-102-9-01-059**ಯಡಿ ಗಣನೆಗೆ ತೆಗೆದುಕೊಂಡು, **RTGS** ಮುಖೇನ ಈಗಾಗಲೇ **Coverage & Quality**ಯಡಿ ಗೊತ್ತುಪಡಿಸಿರುವ **SWSM** ಬ್ಯಾಂಕ್ ಖಾತೆ ಮುಖೇನ ವಿನಿಯೋಗಿಸತಕ್ಕದ್ದು. ಸಿಂಡಿಕೇಟ್ ಬ್ಯಾಂಕ್ ಮೂಲ ಖಾತೆ **ಸಂಖ್ಯೆ:04462010091577** ರಿಂದ **Coverage & Quality** ಕಾರ್ಯಕ್ರಮದ ಖಾತೆ **ಸಂಖ್ಯೆ:04462010094572**ಕ್ಕೆ **ರೂ.50.00**ಲಕ್ಷಗಳನ್ನು ವರ್ಗಾಯಿಸಿ, ಸದರಿ ಅನುದಾನದಿಂದ **C&Q** ಘಟಕದಡಿ ಬೆಳಗಾವಿ ಜಿಲ್ಲಾ ಪಂಚಾಯತ್ ಕಳುಹಿಸುವ ಬಿಲ್‌ಗಳನ್ನು ಮಾನ್ಯ ಮಾಡತಕ್ಕದ್ದು. ಸದರಿ ಅನುದಾನ ವಿನಿಯೋಗದ ಆರ್ಥಿಕ ಮತ್ತು ಭೌತಿಕ ಪ್ರಗತಿಗಳನ್ನು **CE/PRED** ಹಾಗೂ ಬೆಳಗಾವಿ ಜಿಲ್ಲಾ ಪಂಚಾಯತ್ **IMIS**ನಡಿ ದಾಖಲಿಸತಕ್ಕದ್ದು.

4. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 117 ಗ್ರಾನೀಸ(4) 2011 ದಿ:15.10.2011 ರನ್ವಯ ಸಂಬಂಧಪಟ್ಟ ಅಧೀಕ್ಷಕ ಅಭಿಯಂತರರು, **PRED** ವೃತ್ತ ಕಛೇರಿ ಇವರುಗಳು ಈ ಆದೇಶದಡಿ ಅನುಷ್ಠಾನಗೊಳಿಸುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪರಿವೀಕ್ಷಣೆ ಮಾಡಿ, ಸರ್ಕಾರಕ್ಕೆ ವಾಸ್ತವಿಕ ಚಿತ್ರಣ ನೀಡಬೇಕು.

5. ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ/211/ವೆಚ್ಚ-6/2012, ದಿ:08.05.2012 ಹಾಗೂ ಗ್ರಾಅಪಂ.ರಾಜ್_ ಇಲಾಖೆಯ **IFA** ರವರು ಯೋಜನೆಗಳ ಮುಂದುವರಿಕೆಗೆ ಹೊರಡಿಸಿರುವ ಆದೇಶ ಸಂಖ್ಯೆ: ಗ್ರಾಅಪ/13/ಆಂ.ಆ.ಸ/2012, ದಿ:02.04.2012ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-1.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-1.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಇವರ ಆಪ್ತ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಬೆಂಗಳೂರು.
9. ವಿಶೇಷಾಧಿಕಾರಿಗಳು (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ ಬೆಂಗಳೂರು.
10. ಸರ್ಕಾರದ ಆಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಶ್ರೀ ಪ್ರಕಾಶ ಬಾ. ಹುಕ್ಕೇರಿ, ಮಾನ್ಯ ವಿಧಾನಸಭಾ ಸದಸ್ಯರು, ಚಿಕ್ಕೋಡಿ-ಸದಲಗಾ ಮತಕ್ಷೇತ್ರ, ಬೆಳಗಾವಿ ರವರ ಮಾಹಿತಿಗಾಗಿ.
12. ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾಮಂಡಳಿ, ಸಂಕೀರ್ಣ ನಂ55, 4ನೇ ಮಹಡಿ, ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20.
13. ಜಿಲ್ಲಾಧಿಕಾರಿಗಳು, ಬೆಳಗಾವಿ.
14. ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಬೆಳಗಾವಿ.
15. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು, ಬೆಳಗಾವಿ.
16. ವ್ಯವಸ್ಥಾಪಕ ನಿರ್ದೇಶಕರು, KRIDL, ಚಿನ್ನಸ್ವಾಮಿ ಕ್ರೀಡಾಂಗಣ, ಗೇಟಿನ ಸಂಖ್ಯೆ-14, ರಾಜಭವನ ರಸ್ತೆ, ಬೆಂಗಳೂರು-560001. Ph. No.080-22865037, Fax.080-22869016.
17. ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಚಿಕ್ಕೋಡಿ.
18. ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ ಅಧೀಕ್ಷಕ ಅಭಿಯಂತರರು, ಬೆಳಗಾವಿ..
19. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್, ಚಿಕ್ಕೋಡಿ.
20. ಮುಖ್ಯ ಲೆಕ್ಕಾಧಿಕಾರಿಗಳು, ಮುಖ್ಯ ಇಂಜಿನಿಯರ್‌ರ ಕಛೇರಿ, PRED, ಬೆಂಗಳೂರು-20.
21. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
22. ನಿರ್ದೇಶಕರು KRWSSA ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ/ನಿರ್ದೇಶಕರು(ಗ್ರಾಮಸ್ವರಾಜ್)/ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರುಗಳ ಆಪ್ತ ಸಹಾಯಕರು.
23. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB Branch, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು-9.
24. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
25. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
26. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂರಾ ಇಲಾಖೆ(ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
27. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
28. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಮಾಹಿತಿ ಕೇಂದ್ರ (10 ಪ್ರತಿಗಳು).
28. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಅನುಬಂಧ-1

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 42 ಗ್ರಾನೀಸ(3)2012,ಬೆಂಗಳೂರು. ದಿನಾಂಕ:27.06.2012ರ ಲಗತ್ತು**

**ಬೆಳಗಾವಿ ಜಿಲ್ಲೆಯ ಚಿಕ್ಕೋಡಿ-ಸದಲಗಾ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯ ಚಿಕ್ಕೋಡಿ ತಾಲ್ಲೂಕಿನ ಈ ಕೆಳಕಂಡ ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಯ ತುರ್ತು ದುರಸ್ಥಿ / ಸುಧಾರಣೆ ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಿದ ಅನುದಾನ ರೂ.50.00ಲಕ್ಷ.**

| ಕ್ರಸಂ. | ತಾಲ್ಲೂಕು | ಗ್ರಾಮದ ಹೆಸರು | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|
| 1. | ಚಿಕ್ಕೋಡಿ | ಪಟ್ಟಣಕುಡಿ | ಪಟ್ಟಣಕುಡಿ ಗ್ರಾಮದ ಪೂನೇಕರ ಪರೀಟ ವಸಹಾತುವಿನ ಕುಡಿಯುವ ನೀರು ಸರಬರಾಜು ಯೋಜನೆಯ ತುರ್ತು ದುರಸ್ಥಿ/ಸುಧಾರಣೆ ಕಾಮಗಾರಿ. | 5.90 |
| 2. | ಚಿಕ್ಕೋಡಿ | ಚಿಕ್ಕಲವಾಳ | ಚಿಕ್ಕಲವಾಳ ಗ್ರಾಮದ ಪವಾರ ವಸಹಾತುವಿನ ಕುಡಿಯುವ ನೀರು ಸರಬರಾಜು ಯೋಜನೆಯ ತುರ್ತು ದುರಸ್ಥಿ/ಸುಧಾರಣೆ ಕಾಮಗಾರಿ. | 4.90 |
| 3. | ಚಿಕ್ಕೋಡಿ | ನಾಯಿಂಗ್ಲಜ | ನಾಯಿಂಗ್ಲಜ ಗ್ರಾಮದ ಥಳೋಬಾ ವಸಹಾತುವಿನ ಕುಡಿಯುವ ನೀರು ಸರಬರಾಜು ಯೋಜನೆಯ ತುರ್ತು ದುರಸ್ಥಿ/ಸುಧಾರಣೆ ಕಾಮಗಾರಿ. | 5.40 |
| 4. | ಚಿಕ್ಕೋಡಿ | ಖಿಡಕಲಾಟ | ಖಿಡಕಲಾಟ ಗ್ರಾಮದ ಲೋಹಾರ ವಸಹಾತುವಿನ ಕುಡಿಯುವ ನೀರು ಸರಬರಾಜು ಯೋಜನೆಯ ತುರ್ತು ದುರಸ್ಥಿ/ಸುಧಾರಣೆ ಕಾಮಗಾರಿ. | 5.00 |
| 5. | ಚಿಕ್ಕೋಡಿ | ನವಲಿಹಾಳ | ನವಲಿಹಾಳ ಗ್ರಾಮದ ಕುರುಬರ ವಸಹಾತುವಿನ ಕುಡಿಯುವ ನೀರು ಸರಬರಾಜು ಯೋಜನೆಯ ತುರ್ತು ದುರಸ್ಥಿ/ಸುಧಾರಣೆ ಕಾಮಗಾರಿ. | 4.90 |
| 6. | ಚಿಕ್ಕೋಡಿ | ಕೋಥಳಿ | ಕೋಥಳಿ ಗ್ರಾಮದ ಚೌಗುಲಾ ವಸಹಾತುವಿನ ಕುಡಿಯುವ ನೀರು ಸರಬರಾಜು ಯೋಜನೆಯ ತುರ್ತು ದುರಸ್ಥಿ/ಸುಧಾರಣೆ ಕಾಮಗಾರಿ. | 5.40 |
| 7. | ಚಿಕ್ಕೋಡಿ | ಅಂಕಲಿ | ಅಂಕಲಿ ಗ್ರಾಮದ ಕ್ರಾಂತಿ ಚೌಕ್ ವಸಹಾತುವಿನ ಕುಡಿಯುವ ನೀರು ಸರಬರಾಜು ಯೋಜನೆಯ ತುರ್ತು ದುರಸ್ಥಿ/ಸುಧಾರಣೆ ಕಾಮಗಾರಿ. | 4.70 |
| 8. | ಚಿಕ್ಕೋಡಿ | ಕೇರೂರ | ಕೇರೂರ ಗ್ರಾಮದ ಕರ್ನೂರೆ ವಸಹಾತುವಿನ ಕುಡಿಯುವ ನೀರು ಸರಬರಾಜು ಯೋಜನೆಯ ತುರ್ತು ದುರಸ್ಥಿ/ಸುಧಾರಣೆ ಕಾಮಗಾರಿ. | 5.40 |
| 9. | ಚಿಕ್ಕೋಡಿ | ಕೇರೂರ | ಕೇರೂರ ಗ್ರಾಮದ ಪಂಚಾಯತ್ ಭಾಂವಿ ಹತ್ತಿರ ಕುಡಿಯುವ ನೀರು ಸರಬರಾಜು ಯೋಜನೆಯ ತುರ್ತು ದುರಸ್ಥಿ/ಸುಧಾರಣೆ ಕಾಮಗಾರಿ. | 4.00 |
| 10 | ಚಿಕ್ಕೋಡಿ | ನಾಗರಾಳ | ನಾಗರಾಳ ಗ್ರಾಮದ ಮುರಗಾದೇವಿ ವಸಹಾತುವಿನ ಕುಡಿಯುವ ನೀರು ಸರಬರಾಜು ಯೋಜನೆಯ ತುರ್ತು ದುರಸ್ಥಿ/ಸುಧಾರಣೆ ಕಾಮಗಾರಿ. | 4.40 |
| | | | ಒಟ್ಟು | **50.00** |

ಮೇಲ್ಕಂಡ ಅನುದಾನವನ್ನು ಸ್ಥಳೀಯ ಅಗತ್ಯತೆ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಸಲುವಾಗಿ ಮಾತ್ರ ವಿನಿಯೋಗಿಸಬೇಕು.

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ),
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

## ಅನುಬಂಧ-2

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 42 ಗ್ರಾನೀಸ(3)2012, ಬೆಂಗಳೂರು. ದಿನಾಂಕ:27.06.2012ರ ಲಗತ್ತು**

**ಬೆಳಗಾವಿ ಜಿಲ್ಲೆಯ ಚಿಕ್ಕೋಡಿ-ಸದಲಗಾ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯ ಚಿಕ್ಕೋಡಿ ತಾಲ್ಲೂಕಿನ ಈ ಕೆಳಕಂಡ ಗ್ರಾಮಗಳಲ್ಲಿನ ಕುಡಿಯುವ ನೀರು ಸರಬರಾಜು ಯೋಜನೆಯ ತುರ್ತು ದುರಸ್ಥಿ / ಸುಧಾರಣೆ ಕಾಮಗಾರಿಗಳನ್ನು NRDWPಯಡಿ ಪರಿಶೀಲಿಸಿ, 2012-13ನೇ ಸಾಲಿನ ಕ್ರಿಯಾಯೋಜನೆಯಡಿಯಲ್ಲಿ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು:**

**ಚಿಕ್ಕೋಡಿ ತಾಲ್ಲೂಕು:** ಪಟ್ಟಣಕುಡಿ (ಘಸ್ತೆ ವಸಹಾತು), ವಾಳಕಿ (ಖೋತ ವಸಹಾತು), ವಾಳಕಿ (ಫಕಾಲೆ ವಸಹಾತು), ಪಾಂಗೀರಿ-ಏ, ಖಡಕಲಾಟ (ಕುರಬರ ವಸಹಾತು), ಖಡಕಲಾಟ (ಘರಕೆ ಮಾಳ ವಸಹಾತು), ಖಡಕಲಾಟ (ಮರಿಗೌಡಾ ಪಾಟೀಲ ವಸಹಾತು), ತಪಕಾರವಾಡಿ (ಡುಕರೆ ವಸಹಾತು), ಧುಳಗನವಾಡಿ (ಪ.ಜಾ ವಸಹಾತು), ಯಾದ್ಯಾನವಾಡಿ (ಖರಾತ್ ಮತ್ತು ಸಂಪಪಾಳ ವಸಹಾತು), ಕೋಥಳಿ (ಆಶ್ರಮ ಹತ್ತಿರ), ಚಿಂಚಣಿ (ಕರೆಪ್ಪಗೋಳ ವಸಹಾತು), ಕುಪ್ಪಾಣವಾಡಿ (ದೇಶಭೂಷನ ವಸಹಾತು), ಇಂಗಳಿ ಗಾವಠಾನ (ಕುರಬರ ವಸಹಾತು), ಮಾಂಜರಿವಾಡಿ (ಖೋತ ವಸಹಾತು), ಪಟ್ಟಣಕುಡಿ (ಬಸ್ತಿ ವಸಹಾತು), ಅಂಕಲಿ (ಗಡಗೋಲೆ ವಸಹಾತು), ಕೇರೂರ (ಖಿಲಾರೆ ಮತ್ತು ವಾಳಕೆ ವಸಹಾತು), ಕೇರೂರ (ಮಾಳಿ ವಸಹಾತು), ಮತ್ತು ಶಮನೇವಾಡಿ (ಉಗಾರೆ ವಸಹಾತು).

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ),
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ